ಈ) ಈ ನೆರವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ಉಪಯೋಗಿಸಿ ಕೊಳ್ಳಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ರೂ. 1,067.15 ಲಕ್ಷಗಳು

ಇ) 2001-02 ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆಗೆ ಶೇ. 18ರ ಯೋಜನೆಯಡಿ ಯಾವುದೇ ರೀತಿಯ ಕೇಂದ್ರ ಸರ್ಕಾರದ ನೆರವು ಬಂದಿರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಅಬಕಾರಿ ಇಲಾಖೆಗೆ ಬರಬೇಕಾದ ಬಾಕಿ

1606 (534) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2001-02ನೇ ಸಾಲಿನಲ್ಲಿ ಅಬಕಾರಿ ಬಾಬ್ತಿನಿಂದ ವಸೂಲಾದ ಹಣವೆಷ್ಟು?

ಆ) 2002-03ನೇ ಸಾಲಿನಲ್ಲಿ ಎಷ್ಟು ಸಂಪನ್ಮೂಲ ಈ ಬಾಬ್ತಿನಿಂದ ಬರಬಹುದೆಂದು ಅಂದಾಜು ಮಾಡಲಾಗಿದೆ?

ಇ) ಇಲ್ಲಿಯವರೆಗೆ ಅಬಕಾರಿ ಇಲಾಖೆಗೆ ಬರಬೇಕಾದ ಬಾಕಿ ಎಷ್ಟು?

ಈ) ಈ ಬಾಕಿ ಹಣವನ್ನು ವಸೂಲಿ ಮಾಡಲು ಸರ್ಕಾರ ಕೈಕೊಂಡ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ರೂ. 2004.11 ಕೋಟಿಗಳು.

ಆ) ರೂ. 2301.00 ಕೋಟಿಗಳು.

ಇ) ದಿನಾಂಕ 31.3.2002ಕ್ಕೆ 470.34 ಕೋಟಿಗಳು.

ಈ) 1. ಬಾಕಿದಾರರು ಸಿವಿಲ್ ನ್ಯಾಯಾಲಯಗಳಿಂದ ತಡೆಯಾಜ್ಞೆ ಪಡೆಯದ ಹಾಗೆ ಕರ್ನಾಟಕ ಅಬಕಾರಿ ಕಾಯ್ದೆ 1965 ಕ್ಕೆ ತಿದ್ದುಪಡಿ ಮಾಡಿ 68ಬಿ, 68ಸಿ, 68ಡಿ ಕಲಂಗಳನ್ನು ಸೇರ್ಪಡೆ ಮಾಡಿದೆ. ಇದರಿಂದ ಬಾಕಿ ವಸೂಲಾತಿ ಪ್ರಕ್ರಿಯೆಗೆ ನ್ಯಾಯಾಲಯಗಳಿಂದ ಯಾವುದೇ ಅಡೆ-ತಡೆಗಳಿರುವುದಿಲ್ಲ.

2. ಅಬಕಾರಿ ನಿಯಮದ ಪ್ರಕಾರ ಸುಸ್ತಿದಾರರು ಅಬಕಾರಿ ಹರಾಜಿನಲ್ಲಿ ಭಾಗವಹಿಸುವುದನ್ನು ನಿಷೇಧಿಸಿದೆ.

3. ಕಂದಾಯ ಇಲಾಖೆಗೆ ಒಟ್ಟು 146.69 ಕೋಟಿ ರೂ.ಗಳು ಒಳಗೊಂಡಂತೆ 152 ಪ್ರಕರಣಗಳನ್ನು ಬಾಕಿ ವಸೂಲಾತಿಗೆ ಈಗಾಗಲೇ ವಹಿಸಿಕೊಟ್ಟಿದೆ. ಕಂದಾಯ ಇಲಾಖೆಯಿಂದ 94-95ನೇ ಸಾಲಿನಿಂದ 2000-01 ನೇ ಸಾಲಿನ ವರೆಗೆ 4.71 ಕೋಟಿ ರೂ.ಗಳು ವಸೂಲಾಗಿರುತ್ತದೆ.

4. ಇಲಾಖೆಯು ತೆಗೆದುಕೊಂಡ ಕ್ರಮದಿಂದ 92-93 ರಿಂದ ಇಲ್ಲಿಯವರೆಗೆ ಒಟ್ಟು 99.51 ಕೋಟಿ ರೂ.ಗಳು ವಸೂಲಾಗಿರುತ್ತವೆ.

ಬೆಂಗಳೂರು ನಗರದಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿ

1607 (535) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಪ್ರತಿದಿನ ಸರಾಸರಿ ಎಷ್ಟು ವಾಹನ ಚಾಲನೆ ಪರವಾನಗಿ, ನವೀಕರಿಸುವುದು, ನೋಂದಣಿ ಮತ್ತು ತಪಾಸಣೆಗಳು ವಿವಿಧ ಪ್ರಾದೇಶಿಕ ಸಾರಿಗೆ ಇಲಾಖೆಯ ಕಛೇರಿಗಳಲ್ಲಿ ನಡೆಯುತ್ತಿವೆ?

ಆ) ಸರ್ಕಾರ ಸಾರಿಗೆ ಇಲಾಖೆಯ ಕಛೇರಿಗಳಲ್ಲಿರುವ ಭ್ರಷ್ಟಾಚಾರವನ್ನು ತಡೆಗಟ್ಟಲು ಕೈಗೊಂಡ ಕ್ರಮಗಳೇನು?

ಇ) ವಾಹನ ಚಾಲನೆ ಪರವಾನಗಿ, ನೋಂದಣಿ ಮತ್ತು ತಪಾಸಣೆಯನ್ನು ಪಾಸಗೀಕರಣ ಗೊಳಿಸಲು ಸರ್ಕಾರ ನಿರ್ಧರಿಸಿದೆಯೇ?

ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಶ್ರೀ ರಮಾನಾಥ ರೈ.ಬಿ. (ಸಾರಿಗೆ ಸಚಿವರು) :

ಅ) ದಿನವಹಿ ಸರಾಸರಿ ಅಂಕಿಗಳು ಕೆಳಗಿನಂತಿವೆ.

ವಾಹನ ಚಾಲನೆ ಪರವಾನಗಿ ನೀಡುವಿಕೆ	- 326
ಪರವಾನಗಿ ನವೀಕರಿಸುವಿಕೆ	- 252
ವಾಹನದ ನೋಂದಣಿ	- 531
ಅರ್ಹತಾ ಪತ್ರ ನೀಡುವಿಕೆ	- 302

ಆ) 1) ಸಮಗ್ರ ಮಾಹಿತಿಯುಳ್ಳ ವೆಬ್‌ಸೈಟ್‌ನ್ನು ಸ್ಥಾಪಿಸಲಾಗಿದೆ.

2) ಎಲ್ಲಾ ಕಛೇರಿಗಳಲ್ಲಿ ಸಹಾಯಕ ಮೇಜನ್ನು ಆಯೋಜಿಸಲಾಗಿದೆ.

3) ನಾಗರೀಕ ಸನ್ನದನ್ನು ಪ್ರಕಟಿಸಲಾಗಿದೆ.

4) ಕಲಿಕೆ ಚಾಲನಾ ಅನುಜ್ಞಾ ಪತ್ರಕ್ಕಾಗಿ ಅನ್-ಲೈನ್ ವ್ಯವಸ್ಥೆ ಮಾಡಲಾಗಿದೆ.

5) ಬೆಂಗಳೂರಿನ ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ಗಣಕೀರಣಗೊಳಿಸಲಾಗಿದ್ದು, ರಾಜ್ಯದ ಇತರ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳನ್ನು ಹಂತ ಹಂತವಾಗಿ ಗಣಕೀಕರಣ ಗೊಳಿಸಲಾಗುತ್ತಿದೆ.

ಇ) ಇದೊಂದು ಸರ್ಕಾರದ ನೀತಿಯ ಪ್ರಶ್ನೆಯಾಗಿದ್ದು, ಸಾಧಕ ಭಾದಕಗಳನ್ನು ಪರಿಶೀಲಿಸಲಾಗುತ್ತಿದೆ. ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿರುವುದಿಲ್ಲ.

ಬೆಳಗಾವಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಕೆರೆಗಳ ನಿರ್ವಹಣೆ

1608 (1889) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಎಷ್ಟು ಸಣ್ಣ ನೀರಾವರಿ ಕೆರೆಗಳು ಇದೆ;

ಆ) ಸಣ್ಣ ನೀರಾವರಿ ಇಲಾಖೆಗೆ ಸೇರಿದ ಸಣ್ಣ ನೀರಾವರಿ ಕೆರೆಗಳು ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಎಷ್ಟು ಇರುತ್ತವೆ; ಊರು ಹಾಗೂ ಕೆರೆಗಳ ಹೆಸರು ಒದಗಿಸುವುದು;

ಇ) ಬೆಳಗಾವಿ ಜಿಲ್ಲೆಯಲ್ಲಿ ಈ ನೀರಾವರಿ ಕೆರೆಗಳ ನಿರ್ವಹಣೆಗಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ಒದಗಿಸಲಾಗಿದೆ; ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ.